ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority
000071

ಸಂಖ್ಯೆ: ಬೆಂಅಪ್ರಾ/ನಯೋಸ/DLP-11/2016-17/ 855 /2018-19.
No.

ದಿನಾಂಕ:
Date: 08/08/2018

# ಕಾರ್ಯಾದೇಶ

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ವಿಭೂತಿಪುರ ಗ್ರಾಮದ ಸರ್ವೆ ನಂ.124 ರಲ್ಲಿನ ಒಟ್ಟು 06 ಎಕರೆ 21ಗುಂಟೆ [26388.94 ಚ.ಮೀ.] ಪ್ರದೇಶದಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸುವಂತೆ ಜಮೀನಿನ ಮಾಲೀಕರಾದ ಶ್ರೀ.ಬಿಜಯಕುಮಾರ್ ಅಗರ್ ವಾಲ್ ರವರು ಕೋರಿರುವ ಬಗ್ಗೆ.

ಉಲ್ಲೇಖ

1. ಅರ್ಜಿದಾರರ ಮನವಿ ದಿನಾಂಕ 25.06.2016.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 115/2017, ದಿನಾಂಕ 09.11.2017.
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/DLP-11/2016-17/1901/2017-18, ದಿನಾಂಕ 22.01.2018.
4. ಕೆನರಾ ಬ್ಯಾಂಕ್ ಚಲನ್ ನಂ. 11192, ದಿನಾಂಕ 01.02.2018.
5. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/DLP-11/2016-17/2227/2017-18, ದಿನಾಂಕ 17.03.2018.
6. ಅಧಿಕ ಜಿಲ್ಲಾ ನೊಂದಣಾದಿಕಾರಿಗಳು, ಬೆಂಅಪ್ರಾ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ BDA-1-00575-2018-19, ಸಿ.ಡಿ. ನಂ. BDAD236, ದಿನಾಂಕ 27.04.2018.
7. ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲುಕರ, ಎಂ.ಆರ್.ಟಿ.ಎಸ್. ಕರ, ಮೆಟ್ರೋ ಕರ ಮತ್ತು ವಿವಿಧ ಶುಲ್ಕಗಳ ಪರಿಷ್ಕೃತ ದರವನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರುವುದಾಗಿ ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿ ದಿನಾಂಕ 01.02.2018 ರಂದು ನೀಡಿರುವ ಪ್ರಮಾಣ ಪತ್ರ.

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ವಿಭೂತಿಪುರ ಗ್ರಾಮದ ಸರ್ವೆ ನಂ.124 ರಲ್ಲಿನ ಒಟ್ಟು 06 ಎಕರೆ 21ಗುಂಟೆ [26388.94 ಚ.ಮೀ.] ಪ್ರದೇಶದಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವಂತೆ ಉಲ್ಲೇಖ [1] ರಲ್ಲಿ ಶ್ರೀ.ಬಿಜಯಕುಮಾರ್ ಅಗರ್ ವಾಲ್ ರವರು ಕೋರಿದ್ದರು.

ಪ್ರಸ್ತಾವನೆಯನ್ನು ಪರಿಶೀಲಿಸಿ, ವಿಷಯವನ್ನು ಉಲ್ಲೇಖ [2] ರಲ್ಲಿನ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 115/2017, ದಿನಾಂಕ 09.11.2017 ರಲ್ಲಿ ಮಂಡಿಸಿ ಚರ್ಚಿಸಲಾಗಿರುತ್ತದೆ. ಚರ್ಚೆಯ ನಂತರ ಅರ್ಜಿದಾರರು ಸಲ್ಲಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ [NGT]

ಆದೇಶದಂತೆ ನಾಲಾಗೆ Buffer ಅಳವಡಿಸಿ ಸಲ್ಲಿಸಿರುವ ನಕ್ಷೆಯು RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿದ್ದು, ನಕ್ಷೆ ಅನುಮೋದಿಸುವ ಅಧಿಕಾರವನ್ನು ಮಾನ್ಯ ಆಯುಕ್ತರಿಗೆ ಪ್ರತ್ಯಾಯೋಜಿಸಿ, ಸಾಮಾನ್ಯ ಷರತ್ತುಗಳಿಗೊಳಪಡಿಸಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ ವಸತಿ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಸಂಬಂಧ ವಿವಿಧ ಶುಲ್ಕಗಳ ಬಾಬ್ತು ₹. 22,69,790/- ['₹. ಇಪ್ಪತ್ತೆರಡು ಲಕ್ಷದ ಅರವತ್ತೊಂಭತ್ತು ಸಾವಿರದ ಏಳುನೂರ ತೊಂಭತ್ತು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸುವಂತೆ ಉಲ್ಲೇಖ [3] ರ ಪತ್ರದಲ್ಲಿ ತಿಳಿಸಲಾಗಿತ್ತು.

ಅರ್ಜಿದಾರರು ಉಲ್ಲೇಖ [4] ರಂತೆ ದಿನಾಂಕ 01.02.2018 ರಂದು ₹. 22,69,790/- ['₹. ಇಪ್ಪತ್ತೆರಡು ಲಕ್ಷದ ಅರವತ್ತೋಂಭತ್ತು ಸಾವಿರದ ಏಳುನೂರ ತೊಂಭತ್ತು ಮಾತ್ರ] ಗಳನ್ನು ಕೆನರಾ ಬ್ಯಾಂಕ್ ನ ಚಲನ್ ನಂ. 11192 ರ ಮೂಲಕ ಪಾವತಿಸಿರುತ್ತಾರೆ. ಸದರಿ ಮೊತ್ತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯವಾಗಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 05.04.2018 ರಂದು ದೃಢೀಕರಿಸಿರುತ್ತಾರೆ.

ಉಲ್ಲೇಖ [5] ರಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ ಮತ್ತು ಬಯಲು ಜಾಗ ಪ್ರದೇಶಗಳನ್ನು ನೊಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪುಕ್ಕಟೆಯಾಗಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳುವಂತೆ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರರು [ಪೂರ್ವ] ರವರಿಗೆ ತಿಳಿಸಲಾಗಿತ್ತು. ದಿನಾಂಕ 27.04.2018 ರಂದು ಸದರಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿನ ಉದ್ಯಾನವನ ಮತ್ತು ಬಯಲು ಜಾಗ ಪ್ರದೇಶಗಳನ್ನು ಪುಕ್ಕಟೆಯಾಗಿ ಉಲ್ಲೇಖ [6] ರಂತೆ ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಿಕೊಂಡಿರುವುದಾಗಿ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರರು [ಪೂರ್ವ] ರವರು ವರದಿ ನೀಡಿರುತ್ತಾರೆ.

ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲ್ತುಕರ ಎಂ.ಆರ್.ಟಿ.ಎಸ್ ಕರ, ಮೆಟ್ರೋಕರ ಮತ್ತು ವಿವಿಧ ಶುಲ್ಕಗಳ ಪರಿಷ್ಕೃತ ದರವನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರುವುದಾಗಿ ಉಲ್ಲೇಖ [7] ರಲ್ಲಿ ನೋಟರೈಸ್ಡ್ ಪ್ರಮಾಣ ಪತ್ರವನ್ನು ದಿನಾಂಕ 01.02.2018 ರಂದು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ವಿಭೂತಿಪುರ ಗ್ರಾಮದ ಸರ್ವೆ ನಂ.124 ರಲ್ಲಿನ ಒಟ್ಟು 06 ಎಕರೆ 21ಗುಂಟೆ [26388.94 ಚ.ಮೀ.] ಪ್ರದೇಶದಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಅನುಮೋದಿಸಲಾಗಿದೆ.

| | |
|---|---|
| 1 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸುವ ಪ್ರದೇಶದಲ್ಲಿ ವಿವಿದ ಜಾತಿಯ ಮರಗಿಡಗಳನ್ನು ಬೆಳಸಿ ಅಭಿವೃದ್ಧಿ ಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ಧೇಶಗಳಿಗೆ ಬದಲಾಯಿಸಬಾರದು. |

000070

| | |
|---|---|
| 2 | ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಸರಬರಾಜು ಕುರಿತು ವಿವರವಾದ ವರದಿಯನ್ನು ಸಲ್ಲಿಸುವುದು. |
| 3 | ಪ್ರಾಧಿಕಾರವು ಅನುಮೋದಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. |
| 4 | ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆಯುಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು. ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು. |
| 5 | ಸದರಿ ಅಭಿವೃದ್ಧಿ ಯೋಜನೆಯಲ್ಲಿ ಅರ್ಜಿದಾರರೇ ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಮಳೆನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು. |
| 6 | ಪ್ರಶ್ನಿತ ಪ್ರದೇಶದಲ್ಲಿ ಹಾದು ಹೋಗುವ ಹಳ್ಳಕೊಳ್ಳಗಳ ನೀರಿನ ಹರಿವಿಗೆ ಅಡಚಣೆ ಉಂಟು ಮಾಡದೇ ಸರಾಗವಾಗಿ ಹರಿದು ಹೋಗುವಂತೆ ಅಭಿವೃದ್ಧಿಪಡಿಸುವುದು. |
| 7 | ಉದ್ಯಾನವನ ಮತ್ತು ಬಯಲುಜಾಗ, ಸಿ.ಎ ಗಳಿಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಅನುಮೋದಿತ ನಕ್ಷೆ ಪ್ರಕಾರ ಅಳವಡಿಸುವುದು . |
| 8 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಮರಗಿಡಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. |
| 9 | ವಿವರವಾದ ಕಟ್ಟಡ ನಕ್ಷೆಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರವು Structural Stability ಬಗ್ಗೆ ಪರಿಶೀಲಿಸಿಕೊಳ್ಳತಕ್ಕದ್ದು. |
| 10 | ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರವು ಪರಿಶೀಲಿಸಿಕೊಳ್ಳತಕ್ಕದ್ದು. |
| 11 | ವಿವರವಾದ ಕಟ್ಟಡ ನಕ್ಷೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳತಕ್ಕದ್ದು. ಕಟ್ಟಡ ಕಾಮಗಾರಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು BWSSB ಯವರಿಂದ ಪಡೆದು ಉಪಯೋಗಿಸುವುದು. |
| 12 | ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 13 | ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ : ದಾಖಲಾತಿ ನೀಡಿದ್ದು ತಿಳಿದುಬಂದಲ್ಲಿ, ನೀಡಿರುವ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ. |

| | |
|---|---|
| 14 | ದಿನಾಂಕ 16.06.2010 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡಾವಳಿಯಲ್ಲಿನ ತೀರ್ಮಾನದಂತೆ ಹಾಗೂ ದಿನಾಂಕ 07.01.2011 ರಂದು ಜರುಗಿದ ಸಮಿತಿ ಸಭೆಯ ವಿಷಯ ಸಂಖ್ಯೆ 09/2011 ರ ತೀರ್ಮಾನದಂತೆ ಅಭಿವೃದ್ಧಿ ನಕ್ಷೆಯಲ್ಲಿನ Arrangement of Blocks ಗಳನ್ನು ಮಾತ್ರ ನಿಯಮಾವಳಿಯಂತೆ ಪರಿಶೀಲಿಸಲಾಗಿದ್ದು, ಅನ್ವಯಿಸುವ ವಿವಿಧ ಇಲಾಖೆಗಳ NOC ಮತ್ತು ಇನ್ನಿತರ ವಿವರಗಳನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ಅರ್ಜಿದಾರರಿಂದ ಪಡೆದು ನಿಯಮಾನುಸಾರ ಪರಿಶೀಲಿಸಿಕೊಳ್ಳತಕ್ಕದ್ದು. |
| 15 | ವಸತಿ ಅಭಿವೃದ್ಧಿ ಯೋಜನೆಯಲ್ಲಿನ ಘನತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 16 | ದಿನಾಂಕ 21/12/2010 ರ Joint Technical Committee ಹಾಗೂ ದಿನಾಂಕ 07/01/2011 ರ ಸಮಿತಿ ಸಭೆಯ ತೀರ್ಮಾನದಂತೆ, ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ವಿವಿಧ ಇಲಾಖೆಗಳಿಂದ ಪಡೆದ NOC ಗಳನ್ನು ಸಲ್ಲಿಸತಕ್ಕದ್ದು. |
| 17 | ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲುಕರ, ಎಂ.ಆರ್.ಟಿ.ಎಸ್ ಕರ, ಮೆಟ್ರೋಸೆಸ್, ವಿವಿಧ ಇತರೆ ಶುಲ್ಕಗಳ ಪರಿಷ್ಕೃತ ದರವನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ಆದೇಶಕ್ಕೆ ಬದ್ಧರಾಗಿರುವುದಾಗಿ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಬದ್ಧರಾಗಿರತಕ್ಕದ್ದು. |
| 18 | (EWS) ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮತ್ತು (LIG) ಕಡಿಮೆ ವರ್ಗದವರಿಗಾಗಿ ವಸತಿ ಅಭಿವೃದ್ಧಿ ಯೋಜನೆಯಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ಘಟಕಗಳ ಶೇ.10 ರಷ್ಟು ವಸತಿ ಘಟಕಗಳನ್ನು (EWS) ಆರ್ಥಿಕ ದುರ್ಬಲ ವರ್ಗದವರಿಗಾಗಿ ಮತ್ತು (LIG) ಕಡಿಮೆ ಆದಾಯ ವರ್ಗದವರಿಗಾಗಿ ಕಾಯ್ದಿರಿಸತಕ್ಕದ್ದು. |
| 19 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಿಧಿಸುವ ಇತರ ಷರತ್ತುಗಳಿಗೆ ಬದ್ಧರಾಗಿರುವುದು. |

ಆಯುಕ್ತರು,
ಬೆಂಅಪ್ರಾ, ಬೆಂಗಳೂರು.

30/7/18 04/8/18

ಇವರಿಗೆ

ಶ್ರೀ ಬಿಜಯ್ ಕುಮಾರ್ ಅಗರ್ ವಾಲ್,
ಶುಭ್ ಚಾಂದಿ ಗೃಹ ನಿರ್ಮಾಣ ಪ್ರೈ. ಲಿ.,
ನಂ. 3, ಸಲಾರ್ ಪುರಿಯಾ ವಿಂಡ್ಸರ್,
4 ನೇ ಮಹಡಿ, ಹಲಸೂರು ರಸ್ತೆ,
ಬೆಂಗಳೂರು 560 042.